ಶ್ರೀ ಎಸ್. ಕರಿಯಪ್ಪ,—ಕೆಲವರು ಇತರರ ಜಮೀನನ್ನು ಅಕ್ರಮಿಸಿ ಕೊಂಡಿರುವುದರಿಂದ ಕೆಲವರಿಗೆ ಕಡಮೆ ಪ್ರದೇಶ ಸಿಕ್ಕಿದೆ. ಆದುದರಿಂದ ಅಳತೆ ಮಾಡಿಸಿ ಎರಡೂವರೆ ಎಕರೆಗಿಂತ ಕಡಮೆ ದೊರೆತಿರುವವರಿಗೆ ಕಡಮೆ ಇರುವುದನ್ನು ಸೇರಿಸಿ ಕೊಡುವಿರಾ !

ಶ್ರೀ ಕೆ. ಹೆಚ್. ಪಾಟೀಲ್;—ಬೇರೆಯವರು ಅಕ್ರಮವಾಗಿ ಸಾಗುವಳಿ ಮಾಡಿದ್ದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು ಆಗಲೇ ಹೇಳಿದೆ.

ಶ್ರೀ ಎಸ್. ಕರಿಯಪ್ಪ : ಸ್ವಾಮಿ : ಇಲ್ಲಿ ಏನಾಗಿದೆ ಎಂದರೆ ಸರ್ಕಾರ ದವರು ಕೆಲವರಿಗೆ ಕೊಟ್ಟಿರುವುದು ಕೇವಲ ಎರಡೂವರೆ ಎಕರೆ ಜಮೀನಾಗಿದ್ದರೂ ಅವರು ಅಲ್ಲಿ ಒತ್ತರಿಸಿ 4-5 ಎಕರೆ ಜಮೀನನ್ನು ಅಕ್ರಮಿಸಿಕೊಂಡಿದ್ದಾರೆ. ಇನ್ನು ಕೆಲವು ಖದೀಮರಾಗಿರತಕ್ಕ ಜನ ಜಮೀನನ್ನು ತಾವೇ ಅಕ್ರಮವಾಗಿ ಅಕ್ರಮಿಸಿ ಕೊಂಡಿದ್ದಾರೆ. ಇಂಥವರ ಬಗ್ಗೆ ಸರ್ಕಾರದವರೇನು ಕ್ರಮಗಳನ್ನು ಕೈಗೊಳ್ಳುತ್ತಾರೆ ?

ಶ್ರೀ ಕೆ. ಹೆಚ್. ಪಾಟೀಲ್ ; ಅಂಥ ವಿಚಾರಗಳನ್ನು ಸರ್ಕಾರದವರ ನಜರಿಗೆ ತಂದರೆ ಕೂಡಲೇ ವಿಚಾರಣೆ ಮಾಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ : ಹೀಗೆ ಸರ್ಕಾರದ ಜಮೀನು ಕೊಡುವಾಗ ಯಾವುದಾದರೂ ನಿರ್ದಿಷ್ಟವಾದ ಕ್ರಮಗಳನ್ನು ಅನುಸರಿಸುತ್ತಿದ್ದಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್ : ಈ ಜಮೀನುಗಳೆಲ್ಲಾ ಹಿಂದೆ ಕೊಟ್ಟಿದ್ದವು ಗಳು. ಈಗ ಈ ಸರ್ಕಾರ ಯಾರಿಗೂ ಈ ಜಮೀನುಗಳನ್ನು ಕೊಡಬಾರದೆಂತಲೇ ತೀರ್ಮಾನ ಕೈಗೊಂಡಿದೆ. ಆದರೆ ಹಿಂದೆ ಕೊಟ್ಟಿದ್ದವುಗಳನ್ನು ಮಾನವೀಯತೆಯ ದೃಷ್ಟಿಯಿಂದ ನಿಧಾನವಾಗಿ ಬಿಡಿಸಿಕೊಳ್ಳಲಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಆರೋಗ್ಯಸಚಿವರು ಸಭೆಯಲ್ಲಿ ಇಲ್ಲದಿರುವುದರಿಂದ ಪ್ರಶ್ನೆ ನಂ. 53 ಹಾಗೂ 303 ಮುಂದಕ್ಕೆ ಹಾಕಲಾಗಿದೆ.

FODDER COLLECTED BY FOREST DEPARTMENT IN NORTH KANARA DISTRICT.

57. SMT. RADHA BHATT (Ankola).—

Will the Minister for Agriculture and Forests be pleased to state :—

(*a*) the quantum of fodder collected and purchased in Siddapura, Hulekal, Sirsi, Janmane ranges by the Sirsi Forest Division for the drought affect areas ;

(Smt. Radha Bhatt)

(*b*) the expenditure incurred therefor ;

(*c*) the Divisions to which this fodder was sent ?

SRI K. H. PATIL.—(Minister for Agriculture and Forests.)

(a) 39 Truck Loads

(b) Rs. 5,174-75.

(*c*) The Deputy Commissioner, Karwar, as Co-ordinating Officer has arranged for the despatch of three truck loads of fodder grass. Rest of the fodder grass collected has been stored by the Forest Department, awaiting despatch instructions.

ಶ್ರೀಮತಿ ರಾಧಾಭಟ್:— ಇಲ್ಲಿ 39 ಟ್ರಕ್ ಲೋಡಿನಷ್ಟು ಹುಲ್ಲನ್ನು ಶೇಖರಣೆ ಮಾಡಿದ್ದರೂ ಕೇವಲ 3 ಟ್ರಕ್ ಲೋಡ್ ಹುಲ್ಲನ್ನು ಮಾತ್ರ ಬರಗಾಲ ಪೀಡಿತ ಪ್ರದೇಶಕ್ಕೆ ರವಾನಿಸಿ ಉಳಿದುದನ್ನು ಹಾಗೆ ನಿಲ್ಲಿಸಿಕೊಳ್ಳುವುದಕ್ಕೇನು ಕಾರಣ ?

ಶ್ರೀ ಕೆ. ಹೆಚ್. ಪಾಟೀಲ್:—ಅಲ್ಲಿ ಎಷ್ಟು ಡಿಮ್ಯಾಂಡ್ ಬಂದಿತೋ ಅಷ್ಟನ್ನು ಮಾತ್ರ ರವಾನೆ ಮಾಡಿದ್ದಾರೆ. ಅಲ್ಲದೆ ಉಳಿದ ಹುಲ್ಲನ್ನು ರವಾನೆ ಮಾಡುವುದಕ್ಕೆ ಟ್ರಾನ್ಸ್‌ಪೋರ್ಟ್ ಬಾಬ್ತಲ್‌ನೆಕ್ ಬೇರೆ ಇದ್ದಿತು.

ಶ್ರೀಮತಿ ರಾಧಾಭಟ್ :— ಸಂಗ್ರಹಿಸಿದ ಹುಲ್ಲನ್ನು ಸರಿಯಾಗಿ ರಕ್ಷಣೆ ಮಾಡದೆ ಇದ್ದುದರಿಂದಲೂ ಮತ್ತು ಇನ್ನು ಕೆಲವು ಭಾಗದ ಹುಲ್ಲನ್ನು ಅಲ್ಲಿಯ ಅಧಿಕಾರಿಗಳು ಖಾಸಗೀರೀತಿಯಾಗಿ ಮಾರಾಟ ಮಾಡಿಕೊಂಡಿದ್ದಾರೆಂದೂ ಕೆಲವು ಭಾಗ ನಾಶವಾಗಿದೆ ಎಂದೂ ನನಗೆ ತಿಳಿದು ಬಂದಿದೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್ :— ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೆ ಆ ಅಧಿಕಾರಿಗಳು ಅಲ್ಲಿ ಉಳಿಯಲಿಕ್ಕೆ ಸಾಧ್ಯವಿರುತ್ತಿರಲಿಲ್ಲ.

ಶ್ರೀಮತಿ ರಾಧಾಭಟ್ ;— ನಾನು ಸರ್ಕಾರಕ್ಕೆ ಈ ವಿಚಾರವನ್ನು ಮೊದಲೇ ಪತ್ರದ ಮೂಲಕ ತಿಳಿಸಿದ್ದೆ. ಆದರೆ ಅಲ್ಲಿಯ ಕೆಲವು ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಈಗಲಾದರೂ ಸರ್ಕಾರ ದವರು ಇನ್ನೊಮ್ಮೆ ಸರಿಯಾಗಿ ವಿಚಾರಣೆ ಮಾಡಿ ತಪ್ಪಿತಸ್ಥರ ಬಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :... ಅಧಿಕಾರಿಗಳು ತಪ್ಪು ತಿಳುವಳಿಕೆ ಕೊಟ್ಟಿದ್ದಾರೋ ಅಥವಾ ಮಾನ್ಯ ಸದಸ್ಯರು ಕೊಡುತ್ತಿರುವುದು ಸರಿಯಾಗಿಲ್ಲವೊ ಇದನ್ನು ಇನ್ನೊಮ್ಮೆ ತನಿಖೆ ಮಾಡಿದ ನಂತರ ನಿರ್ಧಾರ ಮಾಡಬೇಕಾಗಿದೆ ವಿಚಾರ ಮಾಡೋಣ.

ಶ್ರೀ ಎಸ್. ಬಂಗಾರಪ್ಪ :— ಮಾನ್ಯ ಸದಸ್ಯರಾಗಲೇ ಸರ್ಕಾರಕ್ಕೆ ಪತ್ರ ಬರೆದಿದ್ದೇವೆಂದು ಹೇಳಿದ್ದಾಗ್ಗೂ ಅವರು ಇನ್ನು ಯಾವ ರೀತಿ ಇದನ್ನು ಸರ್ಕಾರದ ಗಮನಕ್ಕೆ ತರಬೇಕು ?

ಶ್ರೀ ಕೆ. ಹೆಚ್. ಪಾಟೀಲ್ :— ಅವರು ಪ್ರಶ್ನೆಯನ್ನು ಹಾಗೆ ಕೇಳಿಲ್ಲ. ಅವರು ಯಾವ ಅಧಿಕಾರಿಯ ಬಗ್ಗೆಯೂ ನಿರ್ದಿಷ್ಟ ಅಪಾದನೆಯನ್ನು ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ ;- ಆ 39 ಟ್ರಕ್ ಹುಲ್ಲಿನಲ್ಲಿ 3 ಟ್ರಕ್ ವಿನಾ ಉಳಿದೆಲ್ಲಾ ಹುಲ್ಲೂ ಅಲ್ಲಿಲ್ಲ. ಅದು ನಾಶವಾಗಿದೆ, ಇಲ್ಲವೇ ಅಕ್ರಮವಾಗಿ ಮಾರಾಟವಾಗಿ ಹೋಗಿದೆ. ಆಲ್ಲಿ ಹುಲ್ಲು ಇಲ್ಲದಿರುವುದರಿಂದ ತಮ್ಮ ಹೊಣೆ ಗಾರಿಕೆ ತಪ್ಪಿಸಿಕೊಳ್ಳಲು ಹೀಗೆ ಉತ್ತರ ಕೊಟ್ಟಿದ್ದಾರಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್:- ಸಿರ್ಸಿ ಡಿವಿಜನ್ನಿನಲ್ಲಿ ಶೇಖರಣೆ ಮಾಡಿದ್ದು 39 ಟ್ರಕ್ ಮಾತ್ರ. ಹಾಗೇ ದಾಂಡೇಲಿ ಡಿವಿಜನ್ನಿನಲ್ಲಿ ಶೇಖರಿಸಿದ್ದು 106 ಟ್ರಕ್ಕು ಅದನ್ನು ಅಲ್ಲಿ ರೈಲ್ವೆ ಸೌಕರ್ಯವಿದ್ದುದರಿಂದ ಬೇಗ ಟ್ರಾನ್ಸ್‌ಪೋರ್ಟ್ ಮಾಡಿದ್ದೇವೆ. ಆದರೆ ಸಿರ್ಸಿ ಸರ್ಕಲ್ಲಿನ ಹುಲ್ಲು ಸ್ವಲ್ಪ ಬಿರಾಸಾಗಿದ್ದುದರಿಂದ ಇದಕ್ಕೆ ಅಷ್ಟು ಹೆಚ್ಚಿನ ಡಿಮ್ಯಾಂಡ್ ಬರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ಅಲ್ಲಿ ಹುಲ್ಲೇ ಇಲ್ಲ. ಎಲ್ಲಾ ನಾಶವಾಗಿ ಹೋಗಿದೆ. ಅದನ್ನು ಪರಿಶೀಲನೆ ಮಾಡಿ ಏಕೆ ಕ್ರಮ ಕೈಗೊಳ್ಳಲಿಲ್ಲ ?

ಶ್ರೀ ಕೆ. ಹೆಚ್. ಪಾಟೀಲ್:- ಅಂಥ ವಿಚಾರಗಳಿದ್ದರೆ ಸರ್ಕಾರದ ನಜರಿಗೆ ತಂದರೆ ತಕ್ಷಣ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

SRI KAGODU THIMMAPPA :- Are you going to investigate the matter ?

SRI K. H. PATIL :—If you bring it to my notice I will certainly investigate it. I have the information that there is stock. If according to the Lon- member there is no stock and the same is brought to my notice I can certainly take suitable action in the matter.

ಶ್ರೀ ಕೋಣಂದೂರು ಲಿಂಗಪ್ಪ :- ಮೂನ್ಯ ಸದಸ್ಯರು ಅವರಿಗೆ ಇಂಥ ವಿಷಯಗಳೇನಾದರೂ ಇದ್ದರೆ ತಿಳಿಸಲಿ ಎಂದು ಹೇಳುತ್ತಲೇ ಇದ್ದಾರೆ ನಾನೇ ಆರಸಾಳುರೇಂಜ್ ಫಾರೆಸ್ಟ್‌ರ ಬಗ್ಗೆ ಹೇಳಿದ್ದೆ. ಆ ವಿಚಾರದಲ್ಲಿ ಏನು ಕ್ರಮ ಕೈಗೊಂಡಿದ್ದಾರೆ ?

SRI K. H. PATIL :—I would like to add to my reply for the information of the Lon. members that out of total number of 25 trucks 23 trucks have already been sent to the scarcity areas.

ಶ್ರೀಮತಿ ರಾಧಾಭಟ್ ;— ಅಲ್ಲಿ ಶೇಖರಣೆ ಮಾಡಿದ್ದು ಹಸೀ ಹುಲ್ಲನ್ನೆಲ್ಲ, ಅದು ಒಣಹುಲ್ಲು ಆದುದರಿಂದ ಆದು ಆಷ್ಟು ಬೇಗ ಹಾಳಾಗುವುದಿಲ್ಲ. ಇದನ್ನು ಮತ್ತೆ ಕೂಲಂಕಷವಾಗಿ ವಿಚಾರ ಮಾಡಿ ತಪ್ಪಿದ್ದರೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್ : ಮೂನ್ಯ ಸದಸ್ಯರ ತೃಪ್ತಿಗಾಗಿ ಇನ್ನೊಮ್ಮೆ ವಿಚಾರಣೆ ನಡೆಸಲು ತಿಳಿಸುತ್ತೇನೆ. ಆದರೆ ನನಗೇನೋ ಈಗ ಕೊಟ್ಟಿರತಕ್ಕ ಉತ್ತರ ಸರಿಯಾಗಿರುವಂತೆ ಕಾಣುತ್ತೆ. ಕೇಳುವಾಗ ಎಲ್ಲ ಹುಲ್ಲೂ ಹಸುರಾಗಿರುತ್ತೆ, ಕಿತ್ತನಂತರ ಅದು ಒಣಗುತ್ತದೆ. ಆದಾಗ್ಯೂ ಇದನ್ನು ವಿಚಾರಣೆ ಮಾಡಿಸೋಣ.

CREDIT FACILITIES AFFORDED TO MARGINAL LAND HOLDERS

84. SRI K. SIDDAIAH (Santhemarahally).—
Will the Minister for Co-operation be pleased to state:—

(*a*) the nature of credit facilities afforded to farmers who hold less extent of lands than that held by the small holders ;